# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಟಿ ರವಿ (ವಿಧಾನಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1359 |
| ಉತ್ತರಿಸಬೇಕಾದ ದಿನಾಂಕ | 19.03.2025 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ ಸಂ | ಮಾನ್ಯ ಸದಸ್ಯರ ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ; (ತಾಲ್ಲೂಕುವಾರು, ವರ್ಷವಾರು ವಿವರವನ್ನು ನೀಡುವುದು) | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಚಿಕ್ಕಮಗಳೂರು ಜಿಲ್ಲೆಗೆ 2017-18 ಮತ್ತು 2019-20ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಒಟ್ಟು 2484 ಮನೆಗಳ ನಿರ್ಮಾಣಕ್ಕೆ ಅನುಮೋದನೆ ದೊರೆತ್ತಿದ್ದು, ತಾಲ್ಲೂಕುವಾರು, ವರ್ಷವಾರು ವಿವರಗಳು ಈ ಕೆಳಕಂಡಂತಿವೆ. |

| ಕ್ರ ಸಂ | ವರ್ಷ | ವಿಧಾನಸಭಾ ಕ್ಷೇತ್ರ | ಮಂಜೂರಾದ ಮನೆಗಳ ಸಂಖ್ಯೆ |
|---|---|---|---|
| 1 | 2017-18 | ಚಿಕ್ಕಮಗಳೂರು | 280 |
| | | ಕಡೂರು | 404 |
| | | ತರೀಕೆರೆ | 250 |
| | | ಒಟ್ಟು | **934** |
| 2 | 2019-20 | ಚಿಕ್ಕಮಗಳೂರು | 500 |
| | | ತರೀಕೆರೆ | 250 |
| | | ಕಡೂರು | 500 |
| | | ಬೀರೂರು | 300 |
| | | ಒಟ್ಟು | **1550** |
| | | ಒಟ್ಟಾರೆ | **2484** |

| ಕ್ರ ಸಂ | ಮಾನ್ಯ ಸದಸ್ಯರ ಪ್ರಶ್ನೆ | ಉತ್ತರ |
|---|---|---|
| ಆ) | ಈ ಮನೆಗಳ ಘಟಕ ವೆಚ್ಚ ಎಷ್ಟು; ಇದರಲ್ಲಿ ಸರ್ಕಾರದ ಅನುದಾನವೆಷ್ಟು; ಫಲಾನುಭವಿಗಳ ವಂತಿಗೆ ಎಷ್ಟು; | ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮನೆಗಳ ಘಟಕ ವೆಚ್ಚವು ಟೆಂಡರ್ ಪ್ರೀಮಿಯಂ ಮತ್ತು ಜಿಎಸ್ ಟಿ ಒಳಗೊಂಡಂತೆ ಸರಾಸರಿ ರೂ 6.74 ಲಕ್ಷಗಳಾಗಿರುತ್ತದೆ. ಮನೆಗಳ ಘಟಕ ವೆಚ್ಚದ ವಿವರ ಹಾಗೂ ಸಹಾಯಧನ ವಿವರಗಳು ಈ ಕೆಳಕಂಡಂತಿದೆ. |

(ರೂ. ಲಕ್ಷಗಳಲ್ಲಿ)

| | ಕೇಂದ್ರ ಸರ್ಕಾರದ ಸಹಾಯಧನ | ರಾಜ್ಯ ಸರ್ಕಾರದ ಸಹಾಯಧನ | ಫಲಾನುಭವಿಗಳ ಪಾಲಿನ ವಂತಿಕೆ |
|---|---|---|---|
| ಸಾಮಾನ್ಯ ವರ್ಗದವರಿಗೆ | ರೂ 1.50 | ರೂ 1.20 | ರೂ 4.04 |
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ | ರೂ 1.50 | ರೂ 2.00 | ರೂ 3.24 |

ಈ ಯೋಜನೆಯಡಿಯ ಫಲಾನುಭವಿಗಳು ಬಡವರಾಗಿದ್ದು, ತಮ್ಮ ಪಾಲಿನ ವಂತಿಕೆಯನ್ನು ಭರಿಸಲು ಅಶಕ್ತರಾಗಿರುವುದರಿಂದ, ಹಾಗೂ ಬ್ಯಾಂಕುಗಳು ಸಾಲ ಸೌಲಭ್ಯ ಒದಗಿಸಲು ಮುಂದೆ ಬಾರದ ಕಾರಣ ಫಲಾನುಭವಿಗಳಿಂದ ಕೇವಲ ರೂ 1.00 ಲಕ್ಷಗಳನ್ನು ಮಾತ್ರ ಪಾವತಿಸಿಕೊಂಡು ಉಳಿದ ಮೊತ್ತವನ್ನು ರಾಜ್ಯ ಸರ್ಕಾರದಿಂದಲೆ ಭರಿಸಲಾಗುತ್ತಿದೆ.

<table>
<tr>
<td>ಇ)</td>
<td>ಚಿಕ್ಕಮಗಳೂರು ನಗರ ಕೊಳಗೇರಿಗಳಲ್ಲಿ ಎಷ್ಟು ಮನೆಗಳ ಕಾರ್ಯ ಆರಂಭಿಸಲಾಗಿದೆ; ಪೂರ್ಣಗೊಂಡ ಹಾಗೂ ಪ್ರಗತಿಯಲ್ಲಿರುವ ಮನೆಗಳೆಷ್ಟು; ಪ್ರಾರಂಭಗೊಳ್ಳದ ಮನೆಗಳೆಷ್ಟು; ಎಷ್ಟು ಮನೆಗಳು ರದ್ದುಗೊಂಡಿವೆ; (ವಿವರ ಒದಗಿಸುವುದು)</td>
<td>ಚಿಕ್ಕಮಗಳೂರು ನಗರಕ್ಕೆ ಮಂಜೂರಾಗಿರುವ ಮನೆಗಳ ಕಾಮಗಾರಿಯ ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ</th><th>ಚಿಕ್ಕಮಗಳೂರು ವಿಧಾನ ಸಭಾ ಕ್ಷೇತ್ರ</th><th>ಮಂಜೂರಾದ ಮನೆಗಳು</th><th>ಪೂರ್ಣಗೊಂಡಿರುವ ಮನೆಗಳು</th><th>ಪ್ರಗತಿಯಲ್ಲಿರುವ ಮನೆಗಳು</th><th>ಪ್ರಾರಂಭಿಸದೆ ಇರುವ ಮನೆಗಳು</th></tr>
<tr><td>1</td><td>ಮೊದಲನೆ ಹಂತ</td><td>280</td><td>182</td><td>98</td><td>0</td></tr>
<tr><td></td><td>ಎರಡನೆ ಹಂತ</td><td>500</td><td>40</td><td>120</td><td>340</td></tr>
<tr><td></td><td>ಒಟ್ಟು</td><td>780</td><td>222</td><td>218</td><td>340</td></tr>
</table>
PMAY(U)-AHP ಘಟಕದಡಿ ಕೊಳಗೇರಿ ಮಂಡಳಿ ವತಿಯಿಂದ ಒಟ್ಟಾರೆ 1,80,253 ಮನೆಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರಕಿದ್ದು, ಪ್ರಾರಂಭಿಸದೆ ಇದ್ದ 61,894 ಮನೆಗಳನ್ನು ಕಡಿತಗೊಳಿಸಲಾಗಿತ್ತು. ಕಡಿತಗೊಳಿಸಲಾಗಿದ್ದ ಮನೆಗಳ ಪೈಕಿ ಚಿಕ್ಕಮಗಳೂರಿಗೆ ಮಂಜೂರಾಗಿದ್ದ 340 ಮನೆಗಳು ಸೇರಿದ್ದವು.<br><br>
ಪ್ರಸ್ತುತ, ಕಡಿತಗೊಳಿಸಲಾಗಿರುವ ಮನೆಗಳನ್ನು ಪುನರ್ ಪ್ರಾರಂಭಿಸಲು ಸಚಿವ ಸಂಪುಟದಿಂದ ಅನುಮೋದನೆ ದೊರಕಿದೆ. ಅದರಂತೆ, ಮನೆಗಳನ್ನು ಪುನರ್ ಪ್ರಾರಂಭಿಸಲು ಕ್ರಮ ವಹಿಸಲಾಗುತ್ತಿದೆ.</td>
</tr>
<tr>
<td>ಈ)</td>
<td>ಈ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು; (ಕಾಮಗಾರಿ ವಿವರ ಒದಗಿಸುವುದು)</td>
<td>ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) ಹಂತ-1 ರಡಿ 280 ಮನೆಗಳ ನಿರ್ಮಾಣ ಕಾಮಗಾರಿಯನ್ನು ಶ್ರೀ. ಸದಾನಂದ ನಾಯಕ್ ಕುಂಬಳೆ, (ಆರ್ಕಿಟೆಕ್ಚರ್ ಪ್ಲಸ್) ನಂ.27-2232/3 ಶಿವರಕ್ಕಾ, ಕದ್ರಿ ಕಂಬಳ ಗುತ್ತು ಸೇವಾ ನಿಲ್ದಾಣ ಹತ್ತಿರ, ಮಂಗಳೂರು-575004 ರವರಿಗೆ ವಹಿಸಲಾಗಿರುತ್ತದೆ.<br><br>
ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಂತ-2 ರಡಿ 500 ಮನೆಗಳ ಕಾಮಗಾರಿಯನ್ನು ಶ್ರೀ. ಲಿಂಗಯ್ಯ ಅರುಣ್ ಕುಮಾರ್, ಮೆ:ಸಿಲ್ ಟೆಕ್ ಇಂಜಿನಿಯರ್ಸ ಮತ್ತು ಗುತ್ತಿಗೆದಾರರು, ನಂ.216 ಕೆ-30 ನಾರಾಯಣ ಶಾಸ್ತ್ರಿ ರಸ್ತೆ, ಕೆ.ಆರ್ ಮೊಹಲ್ಲಾ, ಮೈಸೂರು-570024 ರವರಿಗೆ ವಹಿಸಲಾಗಿರುತ್ತದೆ.</td>
</tr>
<tr>
<td>ಉ)</td>
<td>ಚಿಕ್ಕಮಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ಪ್ರಾರಂಭಿಸಿ ವರ್ಷಗಳು ಕಳೆದರೂ ಇದುವರೆಗೂ ಮನೆಗಳನ್ನು ಪೂರ್ಣಗೊಳಿಸದೆ ಇರುವುದರಿಂದ ಫಲಾನುಭವಿಗಳಿಗೆ ತೀವ್ರ ತೊಂದರೆಯಾಗಿರುತ್ತಿರುವುದು ಸರ್ಕಾರದ</td>
<td>ಫಲಾನುಭವಿಗಳು ತಮ್ಮ ಪಾಲಿನ ವಂತಿಕೆ ಪಾವತಿಸಲು ಹಾಗೂ ಬ್ಯಾಂಕ್‌ಗಳಿಂದ ಫಲಾನುಭವಿಗಳ ಹೆಸರಿನಲ್ಲಿ ಸಾಲಸೌಲಭ್ಯ ಪಡೆಯಲು ಮುಂದೆ ಬರುತ್ತಿಲ್ಲವಾದ್ದರಿಂದ ಮನೆಗಳ ನಿರ್ಮಾಣದಲ್ಲಿ ನಿಗಧಿತ ಭೌತಿಕ ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲ.<br><br>
ಫಲಾನುಭವಿಗಳು ಕೊಳಗೇರಿ ವಾಸಿಗಳಾಗಿದ್ದು, ಬಡವರಾಗಿರುವುದರಿಂದ, ತಮ್ಮ ಪಾಲಿನ ವಂತಿಕೆಯನ್ನು ಭರಿಸಲು ಅಶಕ್ತರಾಗಿದ್ದು ಹಾಗೂ ಬ್ಯಾಂಕುಗಳು ಕೂಡ ಸಾಲಸೌಲಭ್ಯ ಒದಗಿಸಲು ಮುಂದೆ ಬಾರದ ಕಾರಣ ಮನೆಗಳ ಪ್ರಗತಿಯು ಕುಂಠಿತವಾಗಿದ್ದು, ಇದನ್ನು ಸರ್ಕಾರವು ಮನಗಂಡು ಫಲಾನುಭವಿಗಳಿಂದ ಕೇವಲ ರೂ 1.00 ಲಕ್ಷಗಳನ್ನು ಮಾತ್ರ ಪಾವತಿಸಿಕೊಂಡು ಉಳಿದ ಮೊತ್ತವನ್ನು ಸರ್ಕಾರದಿಂದಲೆ ಭರಿಸಲಾಗುತ್ತಿದೆ. PMAY(U) ಯೋಜನೆಯ ವಿಸ್ತರಣೆ ಮಾಡಿದ ಕಾಲಾವಧಿಯು ಡಿಸೆಂಬರ್-2025 ರವರಗೆ ಇದ್ದು, ಈ</td>
</tr>
</table>

| | | |
|---|---|---|
| | ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ರೀತಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು; | ಅವಧಿಯೊಳಗೆ ಮನೆಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ.<br><br>ಮನೆಗಳ ಭೌತಿಕ ಪ್ರಗತಿಗನುಗುಣವಾಗಿ ಬಿಡುಗಡೆಯಾದ ಅನುದಾದ ವಿವರಗಳು **ಅನುಬಂಧ-ಅ** ರಲ್ಲಿ ಒದಗಿಸಿದೆ. |
| ಊ | ಕಾಮಗಾರಿ ವಿಳಂಬ ಮಾಡಿ ಫಲಾನುಭವಿಗಳಿಗೆ ತೊಂದರೆ ಮಾಡುತ್ತಿರುವ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ಒದಗಿಸುವುದು) | ಅಧಿಕಾರಿಗಳು ಫಲಾನುಭವಿ ಪಾಲಿನ ವಂತಿಕೆಯ ಪೈಕಿ ರೂ 1.00 ಲಕ್ಷಗಳನ್ನು ಸಂಗ್ರಹಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.<br><br>ಗುತ್ತಿಗೆದಾರರಿಗೆ ನಿಗದಿತ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಿ ನೋಟಿಸ್‌ಗಳನ್ನು ಜಾರಿಗೊಳಿಸಲಾಗುತ್ತಿದೆ. |

ಸಂಖ್ಯೆ: ವಇ 56 ಹೆಚ್‌ಎಫ್‌ಎ 2025]

(ಬಿ.ಝಡ್ ಜಮೀರ್ ಅಹಮದ್ ಖಾನ್)
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.